**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು

**LAC.No. 166/2019**

ಪಿ**.**ಡಬ್ಲ್ಯೂ**. 1**

ದಿನಾಂಕಃ **12.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು ಮಾಡಲು **1** ನೇ ಎದುರುದಾರರ ಪರ ಶ್ರೀ ಸಿ ಎನ್ ಜಿ ಪರವಾಗಿ ಎಂ ಬಿ ಎನ್ ವಕೀಲರಿಂದಃ**-**

**2016** ರಲ್ಲಿ ನನ್ನ ಜಮೀನು ಹೇಮವಾತಿ ನಾಲೆಗೆ ಭೂಸ್ವಾಧೀನವಾಗಿರುತ್ತದೆ**. 2012-13** ರಲ್ಲಿ ತಮ್ಮ ಜಮೀನು ಹೇಮವಾತಿ ನಾಲೆಗೆ ಭೂ ಸ್ವಾಧೀನವಾಗಿರುತ್ತದೆ ಅಂದರೆ ಸರಿ**. 1** ನೇ ಎದುರುದಾರರು ನನಗೆ **2** ಭಾರಿ ನೋಟೀಸ್ ನ್ನು ನೀಡಿದ್ದು ಅದಕ್ಕೆ ನಾನು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ**.** ಅವಾರ್ಡ್ ನೋಟೀಸ್ ಸ್ವೀಕರಿಸಿದ ನಂತರವೇ ನಾನು ತಕರಾರು ಸಲ್ಲಿಸಿದ್ದು ಅಂದರೆ ಸರಿ**.** ದಿ **30-07-16** ರಂದು ಅವಾರ್ಡ್ ಆಗಿದೆ ಅಂದರೆ ಸರಿ**.** ದಿ **26-10-16** ರಂದು ತಕರಾರು ಸಲ್ಲಿಸಿರುತ್ತೇನೆ ಅಂದರೆ ಸರಿ**.** ದಿ **03-1-10** ರಿಂದ ದಿ **03-01-13** ರವರಿಗೆ ಉಪನೋಂದಾಣಾಧಿಕಾರಿಗಳವರ ಕಚೇರಿಯಲ್ಲಿ ಕ್ರಯಪತ್ರಗಳನ್ನು ಪಡೆದು ಅದರ ಆಧಾರದ ಮೇಲೆ ಪರಿಹಾರದ ಹಣವನ್ನು ನಿಗದಿಪಡಿಸಿರುತ್ತಾರೆ ಅಂದರೆ ಸರಿ**.** ತೋಟಗಾರಿಕೆ ಇಲಾಖೆ**,** ಅರಣ್ಯಾ ಇಲಾಖೆ ಮತ್ತು ಇತರೆ ಎಲ್ಲಾ ಇಲಾಖೆಗಳ ಹೇಳಿಕೆ ಪಡೆದುಕೊಂಡು ಮತ್ತು

ತಮ್ಮ ಹೇಳಿಕೆ ಪಡೆದುಕೊಂಡು ಮರಗಳಿಗೆ ಮತ್ತು ಜಮೀನಿಗೆ ಪರಿಹಾರ ಕೊಟ್ಟಿರುತ್ತಾರೆ ಅಂದರೆ ಸರಿ. ನನಗೆ ಹೊಸ ಕಾಯಿದೆಯ ಪ್ರಕಾರ ಪರಿಹಾರ ನೀಡಿದ್ದಾರೆ ಅಂದರೆ ಸರಿಯಲ್ಲ. ನಿಪಿ-**9** ರ ದಾಖಲೆಗಳು ತಮ್ಮ ಜಮೀನಿಗೆ ಸಂಬಂದಪಟ್ಟ ದಾಖಲೆಗಳು ಅಲ್ಲ ಅಂದರೆ ಸರಿಯಲ್ಲ . ಪ್ರಸ್ತುತ ಜಮೀನು ಹೊನ್ನವಳ್ಳಿ ಗ್ರಾಮದ್ದು . ಎದುರುದಾರರು ಜಮೀನು ಯಾವ ಗ್ರಾಮಕ್ಕೆ ಸೇರಿದೆಯೋ ಅದೇ ಗ್ರಾಮಕ್ಕೆ ಸಂಬಂದಪಟ್ಟ ಬೆಲೆಗಳ ಆಧಾರದ ಮೇಲೆ ಬೆಲೆ ನಿರ್ಧಾರ ಮಾಡುತ್ತಾರೆ , ಇಲ್ಲದಿದ್ದ ಪಕ್ಷದಲ್ಲಿ ಬೇರೆ ಗ್ರಾಮಗಳ ಬೆಲೆ ನಿಗದಿಪಡಿಸುತ್ತಾರೆ ಅಂದರೆ ಸರಿ . ಆ ಕಾರಣಕ್ಕಾಗಿ ನಿಪಿ-**19** ರ ದಾಖಲೆಯು ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ತಮ್ಮ ಜಮೀನಿನಲ್ಲಿ ತೆಂಗಿನ ಮರ **5,** ಅಡಿಕೆ**54,** ಗಳು ಇರಲಿಲ್ಲ ಅಂದರೆ ಸರಿಯಲ್ಲ . ಭೂಮಿಯಲ್ಲಿ ನಾನಾತರಹದ ಭೂಮಿ ಇರುತ್ತದೆ ಅಂದರೆ ಸರಿ , ಪ್ರತಿಯೊಂದು ಭೂಮಿಯಲ್ಲಿ ನಾನಾತರಹದ ಇಳುವರಿ ಬರುತ್ತದೆ ಅಂದರೆ ಸರಿ. ಸ್ವಾಧೀನಪಡಿಸಿಕೊಂಡ ಜಮೀನು ಮರ ಇದ್ದ ಬಗ್ಗೆ ಮತ್ತು ವಾರ್ಷಿಕವಾಗಿ ಆದಾಯ ಬರುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ . ನಿಪಿ-**19** ಸೋಮಲಪುರ ಗ್ರಾಮದ ಹೋಬಳಿಯೇ ಬೇರೆ , ಹೊನ್ನವಳ್ಳಿ ಗ್ರಾಮದ ಹೋಬಳಿಯೇ ಬೇರೆ ಅಂದರೆ ಸರಿ. ಸದರಿ ಗ್ರಾಮದ ಫಲವತ್ತಾದ ಭೂಮಿಯೇ ಬೇರೆ, ಈ ಗ್ರಾಮದ ಫಲವತ್ತಾದ ಭೂಮಿಯೇ ಬೇರೆ ಅಂದರೆ ಸರಿಯಲ್ಲ. ನಿಪಿ-**19** ಬೇರೆ ಗ್ರಾಮಕ್ಕೆ ಸೇರಿರುವುದರಿಂದ ತಮಗೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವ ತೀರ್ಪುಗಳಲ್ಲಿ ಸುಪ್ರೀಂ ಕೋರ್ಟ್ ನಲ್ಲಿ ಸದರಿ

ಕೇಸ್ ಗೆ ಮಾತ್ರ ಅನ್ವಯಿಸುವುದರಿಂದ ಈ ಕೇಸ್ ಗೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ **.** ಸೂಕ್ತವಾದ ಮತ್ತು ವೈಜ್ಞಾನಿಕವಾಗಿ ಪರಿಹಾರವನ್ನು ನೀಡಿರುವುದರಿಂದ ತಾವು ಯಾವುದೇ ಹೆಚ್ಚಿನ ಪರಿಹಾರವನ್ನು ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ**.** ನಿಪಿ**-19** ರ ದಾಖಲೆಯನ್ನು ಜಮೀನು ಹೇಮವಾತಿ ನಾಲೆಗೆ ಹೋಗುತ್ತದೆ ಎಂದು ತಿಳಿದು ಗ್ರಾಮಸ್ಥರು ಸೃಷ್ಟಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ**.** ತಾವು ಸಲ್ಲಿಸಿರುವ ಅರ್ಜಿಯು ಕಾಲಪರಿಮಿತಿಯ ಒಳಗೆ ಬರದ ಕಾರಣ ಕೇಸ್ ಊರ್ಜಿತವಾಗುವುದಿಲ್ಲ ಅಂದರೆ ಸರಿಯಲ್ಲ **.**

**-** ಮರುವಿಚಾರಣೆ ಇಲ್ಲ **-**

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು